ಹೇಳಬೇಡಿ. ದಯಮಾಡಿ ಈ ವಿಷಯವನ್ನು ಮಾಧ್ಯಮಗಳೆದುರಿಗೆ ಹೊರಹಾಕಬೇಡಿ. ನಮ್ಮನ್ನು ಸುಮ್ಮನೆ ದೂಷಿಸುತ್ತಾರೆ" ಎನ್ನುತ್ತಾ ಕಣ್ಣೀರಿಟ್ಟರು ಚೈತನ್ಯನ ತಾಯಿ.

ಚೈತನ್ಯನನ್ನು ನನ್ನ ಕೋಣೆಗೆ ಕರೆದೆ. ಬೆಚ್ಚಗಿನ ಟೆಕ್ಸ್ಟ್ ಮೆಸೇಜ್‌ಗಳು, ಕಚಗುಳಿ ಇಡುವ ಸಾಯಂಕಾಲಗಳು, ನಮ್ಮ ಕನಸಿನ ಹೂದೋಟಗಳು, ಕನಕಾಂಬರ ಹೂವಿನಂತಹ ಮುತ್ತುಗಳು... ಏನೆಂದು ನೆನಪಿಸಲಿ ಚೈತನ್ಯನಿಗೆ. ನೆನಪಿಸಬೇಕೆನಿಸಲಿಲ್ಲ. ನಿಜಕ್ಕೆ ಚೈತನ್ಯ ಎಂದೋ ಒಂದು ದಿನ ಈ ಮಾತು ಹೇಳುತ್ತಾನೆಂದು ನಾನೇಕೆ ಯೋಚಿಸಲಿಲ್ಲ. ಪರಿಸ್ಥಿತಿಗಳಿಗೆ ತಕ್ಕಂತೆ ಪ್ರೀತಿ ಬದಲಾಗುವುದು ಸಹಜವಲ್ಲವೆ. ಆದರೂ ನನ್ನ ಮನಸ್ಸೇಕೆ ದುಃಖದ ಅಲೆಯಾಗಿದೆ. ಅವನು ಏನೆಂದುಕೊಳ್ಳುತ್ತಿದ್ದಾನೋ ತಿಳಿದುಕೊಳ್ಳಬೇಕೆನಿಸಿತು. "ಯಾಕೆ ಚೇತು ಯಾಕೀ ನಿರ್ಣಯ" ಎಷ್ಟು ಸಲ್ಲದೆಂದರೂ ಎಣೆಯಿಲ್ಲದ ಉದ್ವೇಗ ಒತ್ತರಿಸುತ್ತಿದೆ.

"ಅಮ್ಮನಿಗೆ ಇದೆಲ್ಲಾ ಇಷ್ಟವಿಲ್ಲ. ನಿನ್ನ ಗೆಳತನವನ್ನು ಕಳೆದುಕೊಳ್ಳುವುದು ನನಗಿಷ್ಟವಿಲ್ಲ. ಆದರೆ, ಅಮ್ಮ ಮದುವೆಗೆ ಒಪ್ಪುತ್ತಿಲ್ಲ" ಎಂದ.

ದುಃಖವನ್ನು ಅದುಮಿಟ್ಟು ಚೇತರಿಸಿಕೊಳ್ಳಲು ಪ್ರಯತ್ನಿಸುತ್ತಾ ಸ್ವಲ್ಪ ಹೊತ್ತು ನಿಶ್ಶಬ್ದವಾಗಿ ನಿಂತು "ಚೇತು, ನಮಗಿಷ್ಟವಿಲ್ಲದವುಗಳನ್ನು ನಾವು

